## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | 93 |
| ಸದಸ್ಯರ ಹೆಸರು | : | ಶ್ರೀ. ಕೆ. ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 13.02.2024 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಕೇಂದ್ರ ವಲಯದ ತೋಟಗಾರಿಕೆ ಸಮೂಹ ಅಭಿವೃದ್ಧಿ ಕಾರ್ಯಕ್ರಮ (HCDP) ವನ್ನು ಅನುಷ್ಠಾನಗೊಳಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಈ ಕಾರ್ಯಕ್ರಮದ ಧ್ಯೇಯೋದ್ದೇಶ ಮತ್ತು ರೂಪ-ರೇಶೆಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು.) | ಹೌದು.<br><br>ತೋಟಗಾರಿಕೆ ಸಮೂಹ ಅಭಿವೃದ್ಧಿ ಕಾರ್ಯಕ್ರಮ (HCDP) ವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದ ಧ್ಯೇಯೋದ್ದೇಶ ಮತ್ತು ರೂಪ-ರೇಶೆಗಳು ಈ ಕೆಳಕಂಡಂತಿವೆ.<br>1. ಉತ್ಪಾದನಾ ಪೂರ್ವ ಸ್ಥಿತಿಯಿಂದ ಉತ್ಪಾದನೆ ಮತ್ತು ಕಟಾವು ನಂತರದ ನಿರ್ವಹಣೆ ಹಾಗು ಮಾರುಕಟ್ಟೆ, ಬ್ರ್ಯಾಂಡಿಂಗ್ ವರೆಗೆ ತೋಟಗಾರಿಕೆಯ ಉತ್ಪನ್ನಗಳ ಮೌಲ್ಯವರ್ಧನೆ ಕುರಿತಾದ ಸಮಸ್ಯೆಗಳನ್ನು ಪರಿಹರಿಸುವುದು.<br>2. ಉತ್ಪನ್ನಗಳ ಕಟಾವಿನ ನಂತರದ ನಿರ್ವಹಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆಗೆ ಅಗತ್ಯವಿರುವ ಮೂಲಸೌಲಭ್ಯಗಳನ್ನು ಅಭಿವೃದಿಪಡಿಸಿ ಈ ಸಂಬಂಧಿತ ನಷ್ಟವನ್ನು ಕಡಿಮೆ ಮಾಡುವುದು.<br>3. ಸಮೂಹಗಳಲ್ಲಿ ಬೆಳೆಯಲಾಗುವ ನಿಗಧಿತ ಬೆಳೆ ಉತ್ಪನ್ನದ ವಿಶ್ವ ಮಟ್ಟದ ಸ್ಪರ್ಧಾತ್ಮಕತೆಯನ್ನು ವೃದ್ಧಿಸಲು ಅಗತ್ಯವಿರುವ ಹೊಸ ತಂತ್ರಜ್ಞಾನ ಪದ್ಧತಿಗಳನ್ನು ಪರಿಚಯಿಸುವುದು.<br>4. ಮೌಲ್ಯವರ್ಧನಾ ಸರಪಳಿಯಲ್ಲಿ ತೊಡಗಿರುವ ಭಾಗಿದಾರರ ಸಾಮರ್ಥ್ಯವನ್ನು ವೃದ್ಧಿಸುವ ಸಲುವಾಗಿ ಸರ್ಕಾರಿ ಯೋಜನೆಗಳು ಸೇರಿದಂತೆ ವಿವಿಧ ಸಂಪನ್ಮೂಲಗಳನ್ನು ಒಗ್ಗೂಡಿಸುವುದು.<br>5. ಸಮೂಹಕ್ಕೆ ನಿರ್ದಿಷ್ಟವಾದ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಭಾಗಿದಾರರ ಸಾಮರ್ಥ್ಯವರ್ಧನೆ ಮತ್ತು ರೈತರ ಆದಾಯ ಹೆಚ್ಚಿಸುವುದು.<br><br>**ರೂಪರೇಶೆಗಳು:**<br>1. ತೋಟಗಾರಿಕೆ ಉತ್ಪಾದನೆ, ವಹಿವಾಟು ಸಂಗ್ರಹಣೆ, ಉದ್ಯಮ ಸಾರಿಗೆ, ಚಿಲ್ಲರೆ ಮಾರಾಟ, ಸಂಸ್ಕರಣೆ, ರಫ್ತು ಸರಪಳಿಯಲ್ಲಿ ತೊಡಗಿಸಿಕೊಂಡಿರುವ ರೈತರು ಮತ್ತು ಸರ್ಕಾರಿ ಅಥವಾ ಖಾಸಗಿ ಸೇವೆ ನೀಡುವ ಎಲ್ಲಾ ಭಾಗಿದಾರರ ಅಭಿವೃದ್ಧಿಗೆ ಈ ಕಾರ್ಯಕ್ರಮವು ಗಮನ ಕೇಂದ್ರೀಕರಿಸಲಿದೆ.<br>2. ನಿಗಧಿತ ಸಮೂಹಗಳ ಸ್ಪರ್ಧಾತ್ಮಕತೆಯನ್ನು ವೃದ್ಧಿಸಲು ಸಮಗ್ರ ರೀತಿಯಲ್ಲಿ ನೆರವು ನೀಡಲಿದೆ. ವಿಶೇಷ ಅನುಷ್ಠಾನ ಏಜನ್ಸಿಗಳ ಮೂಲಕ ಕಾರ್ಯಕ್ರಮವನ್ನು 3 ಹಂತಗಳಲ್ಲಿ ಜಾರಿಗೊಳಿಸಲಾಗುವುದು ಎಂದರೆ, ಉತ್ಪಾದನಾ ಪೂರ್ವ ಮತ್ತು ಉತ್ಪಾದನಾ ಹಂತ , ಕೊಯ್ಲೋತ್ತರ ಮತ್ತು |

| | | |
|---|---|---|
| | | ಮೌಲ್ಯವರ್ಧನೆ ಹಂತ ಹಾಗೂ ಲಾಜಿಸ್ಟಿಕ್ ಮಾರುಕಟ್ಟೆ ಮತ್ತು ಬ್ರ್ಯಾಂಡಿಂಗ್ ವರೆಗೆ ಅಗತ್ಯವಿರುವ ನೆರವನ್ನು ನೀಡಲಿದೆ. |
| ಆ) | ರಾಜ್ಯದಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ ಎಷ್ಟು ಸಮೂಹ ಅಭಿವೃದ್ಧಿ ಕೇಂದ್ರಗಳನ್ನು ಗುರುತಿಸಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಈ ಸಮೂಹಗಳ ಅಭಿವೃದ್ಧಿಯಲ್ಲಿ ತೋಟ ಬೆಳೆಗಾರರಿಗೆ ವಿತರಿಸುವ ಸಹಾಯಧನ ಮತ್ತು ಸವಲತ್ತುಗಳು ಯಾವುವು? **(ಪೂರ್ಣ ಮಾಹಿತಿ ನೀಡುವುದು)** | ರಾಜ್ಯದಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ 3 ಸಮೂಹ ಅಭಿವೃದ್ಧಿ ಕೇಂದ್ರಗಳನ್ನು ಗುರುತಿಸಿ ಅಭಿವೃದ್ಧಿಪಡಿಸಲಾಗಿದೆ.<br>1. ದಾಳಿಂಬೆ - ಚಿತ್ರದುರ್ಗ, ಬಳ್ಳಾರಿ, ವಿಜಯನಗರ ಮತ್ತು ತುಮಕೂರು<br>2. ಟೊಮ್ಯಾಟೋ - ಕೋಲಾರ ಮತ್ತು ಚಿಕ್ಕಬಳ್ಳಾಪುರ<br>3. ಅನಾನಸ್ – ಉತ್ತರ ಕನ್ನಡ ಮತ್ತು ಶಿವಮೊಗ್ಗ<br>ಸಮೂಹಗಳ ಅಭಿವೃದ್ಧಿಯಲ್ಲಿ ಬೆಳೆಗಾರರಿಗೆ ಶೇ.40ರವರೆಗೆ ಸಹಾಯಧನವನ್ನು ವಿತರಿಸಲಾಗುವುದು.<br>ಮೊದಲ ಹಂತದಲ್ಲಿ ದಾಳಿಂಬೆ HCDP ಕ್ಲಸ್ಟರ್ ನ್ನು ಪ್ರಾಯೋಗಿಕ ಆಧಾರದ (Pilot basis) ಮೇಲೆ ಅನುಷ್ಠಾಗೊಳಿಸಲಾಗುತ್ತಿದೆ. ಮಾಹಿತಿ ಈ ಕೆಳಕಂಡಂತಿದೆ.<br>1. ಈ ಕಾರ್ಯಕ್ರಮದ ರಾಜ್ಯ ನೋಡಲ್ ಇಲಾಖೆಯಾಗಿ ತೋಟಗಾರಿಕೆ ಇಲಾಖೆಯನ್ನು ಮತ್ತು ಕೆಪೆಕ್ ಸಂಸ್ಥೆಯನ್ನು Cluster Development Agency ಯಾಗಿ ನೇಮಿಸಲಾಗಿದೆ.<br>2. ರಾಷ್ಟ್ರೀಯ ತೋಟಗಾರಿಕೆ ಮಂಡಳಿ (NHB) ಸಂಸ್ಥೆಯು ಕೇಂದ್ರ ಸರ್ಕಾರದ ನೋಡಲ್ ಸಂಸ್ಥೆಯಾಗಿದ್ದು, ಅದರೊಂದಿಗೆ ತ್ರಿಪಕ್ಷೀಯ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.<br>3. M/s Associated Industrial Corporation Mangalore ಸಂಸ್ಥೆಯನ್ನು ಅನುಷ್ಠಾನ ಏಜಿನ್ಸಿಯನ್ನಾಗಿ ಟೆಂಡರ್ ಮೂಲಕ ಆಯ್ಕೆ ಮಾಡಲಾಗಿದೆ.<br>4. ಈ ಸಂಸ್ಥೆ ಮತ್ತು ಕೆಪೆಕ್ ಸಂಸ್ಥೆಗಳು ಒಡಂಬಡಿಕೆ ಮಾಡಿಕೊಂಡಿರುತ್ತವೆ.<br>5. ತೋಟಗಾರಿಕೆ ಇಲಾಖೆ, ಕೆಪೆಕ್ ಮತ್ತು ಅನುಷ್ಠಾನ ಏಜಿನ್ಸಿ ಸಹಯೋಗದೊಂದಿಗೆ ಚಿತ್ರದುರ್ಗ ಬಳ್ಳಾರಿ ವಿಜಯನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ಯೋಜನೆ ಬಗ್ಗೆ ರೈತರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಕೈಗೊಳ್ಳಲಾಗಿದೆ.<br>6. ಕೇಂದ್ರ ಸರ್ಕಾರವು NHB – ಸುರಕ್ಷಾ Web Portal ಸಿದ್ಧಪಡಿಸುತ್ತಿದೆ. |
| ಇ) | ರಾಜ್ಯದಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ ರೈತ ಉತ್ಪನ್ನ ಸಂಸ್ಥೆ(FPO) ಗಳನ್ನು ಸ್ಥಾಪಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಸಂಸ್ಥೆಗಳ ಮುಖೇನ ಕೈಗೊಂಡಿರುವ ಪ್ರಮುಖ ಹಣ್ಣು-ಹಂಪಲು ಬೆಳೆಗಳು ಯಾವುವು?**(ಪೂರ್ಣ ಮಾಹಿತಿ ನೀಡುವುದು)** | ಈ ಕಾರ್ಯಕ್ರಮದ ಅಡಿಯಲ್ಲಿ ರೈತ ಉತ್ಪನ್ನ ಸಂಸ್ಥೆ(FPO) ಗಳನ್ನು ಸ್ಥಾಪಿಸಿರುವುದಿಲ್ಲ. |

No:HORTI 53 HGM 2024

(ಎಸ್.ಎಸ್.ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು